## ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/42/2015 16　　　　ದಿನಾಂಕ: 28.07.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

**ವಾದಿ (ಶ್ರೀ/ಶ್ರೀಮತಿ)**

ಜೆ.ಹೆಚ್.ಎಂ. ಗುರುಬಸಮ್ಮ ಗಂಡ ಎಸ್ ಎಂ ಬಸಯ್ಯ ಜಿ.ಕೋಡಿಹಳ್ಳಿ ಗ್ರಾಮ ಹಬೊಹಳ್ಳಿ ತಾಲೂಕು

[ಶ್ರೀ ಎನ್ ಗುರುಬಸವರಾಜ ವಕೀಲರು ಹಬೊ ಹಳ್ಳಿ]

**ಪ್ರತಿವಾದಿ (ಶ್ರೀ/ಶ್ರೀಮತಿ)**

ಜೆ.ಹೆಚ್.ಎಂ. ಪಾರ್ವತಮ್ಮ ಗಂಡ ಲೇಟ್ ಜೆ.ಹೆಚ್.ಎಂ.ರುದ್ರಮುನಿಸ್ವಾಮಿ ಜಿ.ಕೋಡಿಹಳ್ಳಿ ಗ್ರಾಮ ಹಬೊ ಹಳ್ಳಿ ತಾಲೂಕು.
[ಶ್ರೀ ಹೆಚ್ ಸತ್ಯನಾರಾಯಣ ವಕೀಲರು ಹಬೊ ಹಳ್ಳಿ]

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಬಸರಕೋಡು | 305/ಇ/2 | 5.11 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಸರಕೋಡು ಗ್ರಾಮದ ಸ.ನಂ. 305/ಇ/2 ವಿಸ್ತೀರ್ಣ 5.11 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ವಿಲ್ಲುನಾಮೆ ದಸ್ತಾವೇಜು ಪ್ರಕಾರ ಖಾತೆ ಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್45/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:10.03.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪರವಾಗಿ ಎನ್ ಗುರುಬಸವರಾಜ ವಕೀಲರು ಹಬೊ ಹಳ್ಳಿ ಇವರು ವಕಾಲತ್ತು ನಾಮೆ ಸಲ್ಲಿಸುತ್ತಾ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ ಸದರಿಯವರ ಪ್ರಕಾರ ವಾದಿಗಳ ತಂದೆ ಜೆ.ಹೆಚ್.ರುದ್ರಮುನಿಸ್ವಾಮಿ ಇವರು ಬಸಮ್ಮ ಎನ್ನುವವರನ್ನು ವಿವಾಹವಾಗಿದ್ದು ಇವರಿಗೆ 1 ಗಂಗಮ್ಮ (ಮೋತಿ) 2 ಗೌರಮ್ಮ (ವಿವಾಹಿತೆ) 3) ಜೆ.ಹೆಚ್.ಎಂ. ಬಸವರಾಜಯ್ಯ (ಮೋತಿ) 4 ಗುರುಬಸಮ್ಮ (ವಾದಿಗಳು) ಎಂಬ ನಾಲ್ಕು ಜನ ಮಕ್ಕಳಿದ್ದು ಶ್ರೀಮತಿ ಬಸಮ್ಮ ಇವರು ಜೆ.ಹೆಚ್.ಎಂ. ರುದ್ರಮುನಿಸ್ವಾಮಿ ಇವರ ಮೊದಲನೇ ಪತ್ನಿಯಾಗಿರುತ್ತಾರೆ, ವ್ಯಾಜ್ಯದ ಜಮೀನನ್ನು ವಾದಿಗಳ ತಾಯಿಯು ನೊಂದಣಿ ಕ್ರಯ ಪತ್ರದ ಮೂಲಕ ನೀಡಿದ್ದು ಅವರ ಜೀವಿತ ಅವಧಿಯಲ್ಲಿ ವ್ಯಾಜ್ಯದ ಜಮೀನು ತನ್ನ ಹಕ್ಕು ಅಧೀನದಲ್ಲಿರುತ್ತದೆ. ವಾದಿಗಳ ತಂದೆ ಶ್ರೀ ಜೆ.ಹೆಚ್ ಎಂ ರುದ್ರಮುನಿಸ್ವಾಮಿ ಇವರು ಪುನಃ ಶಾಂತಮ್ಮ ಎನ್ನುವವರನ್ನು ವಿವಾಹವಾಗಿರುತ್ತಾರೆ ನಂತರ ಸದರಿಯವರು ಮರಣ ಹೊಂದಿರುತ್ತಾರೆ ತದನಂತರ

30/7/16

- ಪ್ರತಿವಾದಿಗಳಾದ ಪಾರ್ವತಮ್ಮ ಇವರನ್ನು 3ನೇ ಮದುವೆಯಾಗಿರುತ್ತಾರೆ ಸದರಿಯವರಿಗೆ ಹಾಲಮ್ಮ ಎನ್ನುವ ಮಗಳಿದ್ದು ಸದರಿಯವರು ವಿವಾಹತರಾಗಿರುತ್ತಾರೆ. ವಾದಿಯ ಸಹೋದರ ಜೆ.ಹೆಚ್.ಎಂ. ಬಸವರಾಜಯ್ಯ ಮತ್ತು ಸಹೋದರಿಯರು ತಮ್ಮ ತಂದೆಯ 3ನೇ ಹೆಂಡತಿ ಪಾರ್ವತಮ್ಮ ಇವರೊಂದಿಗೆ ಸರಿ ಬಾರದ ಕಾರಣ ದಿನಾಂಕ:30.11.1999 ರಂದು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ, ಕೌಟಂಬಿಕ ಪರಿಸ್ಥಿತಿಯನ್ನು ಮನಗಂಡು ವಾದಿಯ ಸಹೋದರನಾದ ಬಸವರಾಜಯ್ಯ ಇವರು ವಾದಿಯ ಹೆಸರಿಗೆ ತನ್ನ ಭಾಗಕ್ಕೆ ಬಂದ ಜಿ.ಕೋಡಿಹಳ್ಳಿ ಗ್ರಾಮದ ಸ.ನಂ. 292ಅ ವಿಸ್ತೀರ್ಣ 12.00 ಎಕರೆ ಜಮೀನಿನ ಪೈಕಿ 3.00 ಎಕರೆ ಜಮೀನನ್ನು ಹಾಗೂ ವ್ಯಾಜ್ಯದ ಜಮೀನನ್ನು ನೊಂದಣಿ ವಿಲ್ಲು ದಸ್ತಾವೇಜು ಸಂಖ್ಯೆ 30/2008-09 ದಿನಾಂಕ:29.01.2009 ರ ಮೇರೆಗೆ ನೀಡಿರುತ್ತಾರೆ ಸದರಿ ವಿಲ್ಲು ನಾಮೆ ಬರೆದುಕೊಟ್ಟ ನಂತರ ದಿನಾಂಕ:06.02.2014 ರಂದು ಮರಣ ಹೊಂದಿರುತ್ತಾರೆ ಕಾರಣ ಸದರಿ ವ್ಯಾಜ್ಯದ ಜಮೀನನ್ನು ವಿಲ್ಲುನಾಮೆ ದಸ್ತಾವೇಜು ಮೇರೆಗೆ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:13.01.2016 ರಂದು ಲಿಖಿತ ತಕರರಾರನ್ನು ಸಲ್ಲಿಸಿರುತ್ತಾರೆ ಇವರ ಪರವಾಗಿ ಹೆಚ್ ಸತ್ಯನಾರಾಯಣ ವಕೀಲರು ಹಬೊ ಹಳ್ಳಿ ಇವರು ಪ್ರತಿವಾದಿಗಳ ಪರವಾಗಿ ವಕಾಲತ್ತುನಾಮೆ ಸಲ್ಲಿಸಿ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ ಸದರಿಯವರ ಪ್ರಕಾರ ವ್ಯಾಜ್ಯದ ಜಮೀನು ವಾದಿಗಳು ಮಂಡಿಸಿದ ವಾದವನ್ನು ಅಲ್ಲಗಳೆಯುತ್ತಾ ಪ್ರಸ್ತುತ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಈ ಹಿಂದೆ ನಾಡ ಕಛೇರಿ ತಂಬ್ರಹಳ್ಳಿ ನ್ಯಾಯಾಲಯದ ಪ್ರಕರಣ ಸಂಖ್ಯೆ ನಂ.ಕಂ.ಪಹಣಿ.ವಿವಾದ.41/2014-15 ದಿನಾಂಕ:27.07.2014 ರಲ್ಲಿ ವಾದಿಗಳು ಸಲ್ಲಿಸಿದ ಮನವಿಯನ್ನು ವಜಾಗೊಳಿಸಿ ಆದೇಶ ನೀಡಿರುತ್ತಾರೆ, ಆದರೆ ವಾದಿಗಳು ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸದೇ ಪುನಃ ಇದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಸದರಿ ಪ್ರಕ್ರಿಯೆಯು ಕಾನೂನು ಬಾಹೀರವಾಗಿದ್ದು ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಈಗಾಗಲೇ ಮಾನ್ಯ ಸಿವಿಲ್ ನ್ಯಾಯಾದೀಶರು ಮತ್ತು ಜೆಎಂಎಫ್‌ಸಿ ಹಗರಿ ಬೊಮ್ಮನಹಳ್ಳಿ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ 258/2014 ರಲ್ಲಿ ವಾದಿಗಳು ದಾವೆ ಹೂಡಿದದು ಸದರಿ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಪ್ರಸ್ತುತ ಹಕ್ಕುಬದಲಾಣೆ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

ವಾದಿ ಹಾಗೂ ಪ್ರತಿವಾದಿಗಳು ಮಂಡಿಸಿದ ವಾದ ಪ್ರತಿವಾದವನ್ನು ಪರಿಶೀಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.

1. ಹಾಲಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನು ಜೆ.ಹೆಚ್ಎಂ. ಬಸವರಾಜಯ್ಯ ತಂದೆ ರುದ್ರಮುನಿಸ್ವಾಮಿ ಜಿ ಕೋಡಿಹಳ್ಳಿ ಇವರ ಹೆಸರಿನಲ್ಲಿರುತ್ತದೆ.
2. ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ಬಸವರಾಜ ತಂದೆ ರುದ್ರಮುನಿಸ್ವಾಮಿ ಇವರು ದಿನಾಂಕ:06.02.2014 ರಂದು ಮರಣ ಹೊಂದಿರುತ್ತಾರೆ.
3. ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಈ ಹಿಂದೆ ಮಾಡಲಾದ ಈ ಕಾರ್ಯಾಲಯದ ಆದೇಶ ಸಂಖ್ಯೆ ಸಂ.ಕಂ.ಪಹಣಿ.ವಿವಾದ.41/2014-15 ದಿನಾಂಕ:22.07.2014 ರ ಆದೇಶದ ಪ್ರತಿಯನ್ನು ಪರಿಶೀಲಿಸಲಾಗಿ ಸೂಕ್ತ ವಿಚಾರಣೆ ನಂತರ ಉಭಯ ಪಕ್ಷಕಾರರಿಗೆ ತಮ್ಮ ನ್ಯಾಯಕ್ಕೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶ ನೀಡಲಾಗಿರುತ್ತದೆ.
4. ಪ್ರತಿವಾದಿ ಪರ ವಕೀಲರು ಪ್ರಸ್ತುತ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯದೀಶರು ಮತ್ತು ಜೆ.ಎಂ.ಎಫ್.ಸಿ ಹಗರಿ ಬೊಮ್ಮನಹಳ್ಳಿ ರಲ್ಲಿ ದಾವೆ ಸಂಖ್ಯೆ 258/2014 ರಲ್ಲಿ ಪ್ರಕರಣವು ವಿಚಾರಣೆಗೆ ಬಾಕಿ ಇರುವುದಾಗಿ ತಿಳಿಸಿರುತ್ತಾರೆ.

ಎ.ವಿಲೇ.ನಂ.ಕಂ.ಪಹಣಿ.ವಿವಾದ/42/2015 16

5. ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ನೊಂದಣಿ ವಿಲ್ಲುನಾಮೆ ದಸ್ತಾವೇಜು ಸಂಖ್ಯೆ 30/2008-09 ದಿನಾಂಕ:29.01.2009 ರ ಪ್ರತಿಯನ್ನು ಪರಿಶೀಲಿಸಲಾಗಿ ಕೋಡಿಹಳ್ಳಿ ಗ್ರಾಮದ ಜೆ.ಹೆಚ್.ಎಂ. ಬಸವರಾಜಯ್ಯ ತಂದೆ ರುದ್ರಮುನಿಸ್ವಾಮಿ ಇವರ ವಾದಿಗಳಿಗೆ ವ್ಯಾಜ್ಯದ ಜಮೀನನ್ನು ತನ್ನ ಜೀವಿತಾವಧಿಯಲ್ಲಿ ವಿಲ್ಲು ಬರೆದುಕೊಟ್ಟಿರುವುದಾಗಿ ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಈ ಹಿಂದೆ ಈ ಕಛೇರಿ ಆದೇಶ ಸಂಖ್ಯೆ ಸಂ.ಕಂ.ಪಹಣಿ.ವಿವಾದ.41/2014-15 ದಿನಾಂಕ:22.07.2014 ರಲ್ಲಿ ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿರುವುದರಿಂದ ಹಾಗೂ ನೊಂದಣಿ ವಿಲ್ಲುನಾಮೆ ದಸ್ತಾವೇಜು ವಿವಾದಾಸ್ಪದವಾಗಿರುವುದರಿಂದ ಅಲ್ಲದೇ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಈಗಾಗಲೇ ಮಾನ್ಯ ಸಿವಿಲ್ ನ್ಯಾಯಾಲಯ ಜೆಎಂಎಫ್‌ಸಿ ಹಗರಿಬೊಮ್ಮನಹಳ್ಳಿ ರಲ್ಲಿ ವಿಚಾರಣೆಗೆ ಬಾಕಿ ಇರುವುದರಿಂದ ಪ್ರಕರಣವು ಸಂಪೂರ್ಣ ಸಿವಿಲ್ ಸ್ವರೂಪವಾಗಿದ್ದು ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶ ನೀಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಸರಕೋಡು ಗ್ರಾಮದ ಸ.ನಂ. 305/ಇ/2 ವಿಸ್ತೀರ್ಣ 5.11 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: ೨೮.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.